# ಕನ್ನಡ ಪೋಸ್ಟ್

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 30 | Pages. 2 | Date: 27-12-2025, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 30 - ಪುಟಗಳು : 2 | 27-12-2025 | ಶನಿವಾರ | Ph: 8762954248 | ದರ : ₹1


# ಪುಂಡ-ಪೋಕರಿಗಳು ಕಂಡುಬಂದರೆ ಜಾಗೃತೆ ವಹಿಸಿ

## ವಿದ್ಯಾರ್ಥಿನಿಯರಿಗೆ ಹಿರೀಸಾವೆ ಪಿಎಸ್ಐ ರೂಪಾ ಸಲಹೆ | ಅರಿವು ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪುಂಡ-ಪೋಕರಿಗಳ ಹಾವಳಿಗೆ ಕಡಿವಾಣ ಹಾಕಲು ಮತ್ತು ಅವರಿಂದ ಕಿರುಕುಳಕ್ಕೆ ಒಳಗಾಗದಿರಲು ಹೆಣ್ಣು ಮಕ್ಕಳು ಸಾಕಷ್ಟು ಜಾಗೃತಿ ವಹಿಸಬೇಕು ಎಂದು ಹಿರೀಸಾವೆ ಪೊಲೀಸ್ ಠಾಣೆಯ ಪಿಎಸ್ಐ ರೂಪದೇವಿ ಬಿರಾದಾರ್ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ಪಿಎಂಶ್ರೀ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪೋಕ್ಸೊ ಕಾಯ್ದೆ ಹಾಗೂ ಇತರ ಜಾಗೃತಿ ವಿಷಯಗಳ ಬಗ್ಗೆ ಅರಿವು ಮೂಡಿಸಿದರು.

ರಸ್ತೆಯಲ್ಲಿ ಓಡಾಡುವಾಗ ಅಪರಿಚಿತರಿಂದ ಅಥವಾ ಶಾಲೆಗಳಲ್ಲಿ ಸಹಪಾಠಿಗಳು ಇಲ್ಲವೇ ಇತರರಿಂದ ಅಸಭ್ಯ ವರ್ತನೆ ಕಂಡು ಬಂದಲ್ಲಿ ಕೂಡಲೇ ಶಿಕ್ಷಕರಿಗೆ ತಿಳಿಸಬೇಕು. ಅವಕಾಶವಿದ್ದಲ್ಲಿ 1098 ಸಹಾಯವಾಣಿಗೆ ಕರೆ ಮಾಡಬೇಕು. ಇಲ್ಲವೇ ಮನೆಗೆ ತೆರಳಿದ ತಕ್ಷಣ ಪಾಲಕರ ಗಮನಕ್ಕೆ ತರಬೇಕು. ಇದರಿಂದ ತಕ್ಷಣ ಕ್ರಮ ಕೈಗೊಂಡು ಸಂಭಾವ್ಯ ಅಪಾಯದಿಂದ ರಕ್ಷಿಸಿ



ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

### ಹಳಿ ತಪ್ಪಿದ ಜೀವನ ಸರಿಯಾಗದು

ಶೈಕ್ಷಣಿಕ ಹಂತದಲ್ಲಿ ಓದು ಹಾಗೂ ಮುಂದಿನ ಸಾಧನೆಯ ಬಗ್ಗೆ ಮಾತ್ರ ಚಿಂತನೆ ಮಾಡಬೇಕು. ನಂತರ ಎಲ್ಲವೂ ತಾನಾಗಿಯೇ ಸಿಗಲಿದೆ. ಆದರೆ ವ್ಯಾಮೋಹಕ್ಕೆ ಒಳಗಾಗಿ ದಾರಿ ತಪ್ಪಿದರೆ ಮತ್ತೊಮ್ಮೆ ಜೀವನವನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ನಮ್ಮ ಬದುಕು ರೂಪಿಸುವಲ್ಲಿ ಪರಿಶ್ರಮ ಪಡುತ್ತಿರುವ ಪಾಲಕರ ಬಗ್ಗೆ ಗೌರವ ಬೆಳೆಸಿಕೊಳ್ಳಬೇಕು. ನಮ್ಮಿಂದ ಅವರ ಆಸೆ ಹಾಗೂ ನಂಬಿಕೆಗೆ ದ್ರೋಹ ಆಗಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

### ಮೊಬೈಲ್ ಗೀಳು ಒಳ್ಳೆಯದಲ್ಲ

ಟಿವಿ ವೀಕ್ಷಣೆಯಿಂದ ಒಂದಷ್ಟು ಮನರಂಜನೆ ಸಿಗಬಹುದು. ಹಾಗೆಯೇ ಶೈಕ್ಷಣಿಕ ವ್ಯವಸ್ಥೆಗೆ ಮೊಬೈಲ್ ಬಳಕೆ ಅಗತ್ಯ. ಆದರೆ ಮುಂದುವರಿದಂತೆ ಹೆಚ್ಚು ಮೊಬೈಲ್ ಗೀಳು ಅಂಟಿಸಿಕೊಂಡರೆ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ಕಷ್ಟವಾಗಲಿದೆ. ಶಿಕ್ಷಣವನ್ನು ನಂಬಿ ಮುನ್ನಡೆದರೆ ಭವಿಷ್ಯ ಉಜ್ವಲವಾಗಿರುತ್ತದೆ ಎಂದು ಸಲಹೆ ನೀಡಿದರು.

ಮಕ್ಕಳು ರೀಲ್ಸ್ ಮಾಡಿ ಅಪ್ಲೋಡ್ ಮಾಡುವುದು ಅಥವಾ ಫೋಟೋ ಹರಿಬಿಡುವುದು ಒಳ್ಳೆಯ ಬೆಳವಣಿಗೆಯಲ್ಲ. ಅಪರಿಚಿತರು ಭಾವಚಿತ್ರ, ವಿಡಿಯೋ ದುರ್ಬಳಕೆ ಮಾಡಿಕೊಂಡು ನಿಮ್ಮ ನೆಮ್ಮದಿ ಕಸಿಯುವ ಸಾಧ್ಯತೆ ಇದೆ. ಅಥವಾ ಬ್ಲಾಕ್ ಮೇಲ್ ಮಾಡುವ ಸಾಧ್ಯತೆಗಳ ಬಗ್ಗೆ ಎಚ್ಚರವಾಗಿರಬೇಕು ಎಂದರು.

18 ವರ್ಷ ತುಂಬುವ ಮೊದಲೇ ವಾಹನ ಚಾಲನೆ ಮಾಡುವುದು ಅಪರಾಧವಾಗಿದ್ದು ದಂಡ ಕಟ್ಟಬೇಕಾಗುತ್ತದೆ. 18 ವಯಸ್ಸು ದಾಟಿದ ನಂತರ ಚಾಲನಾ ಪರವಾನಗಿ, ವಿಮೆ ಸೇರಿದಂತೆ ಅಗತ್ಯ ದಾಖಲಾತಿಗಳನ್ನು ಪಡೆದುಕೊಳ್ಳಬೇಕು. ದ್ವಿಚಕ್ರ ಸವಾರಿ ವೇಳೆ ಹೆಲ್ಮೆಟ್ ಧರಿಸುವುದರ ಜತೆಗೆ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು ಅಗತ್ಯ ಎಂದರು.

ಬ್ಯಾಂಕ್ ವ್ಯವಹಾರದಲ್ಲಿ ಸಾಕಷ್ಟು ಎಚ್ಚರಿಕೆ ಇರಬೇಕು. ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಬ್ಯಾಂಕಿಂಗ್ ಕಾರಣ ಅಪರಿಚಿತರು ಬ್ಯಾಂಕ್ ಉದ್ಯೋಗಿಗಳಂತೆ ವರ್ತಿಸಿ ಕರೆ ಮಾಡಿ ಒಟಿಪಿ ಪಡೆಯುವ ಮೂಲಕ ಗ್ರಾಹಕರ ಖಾತೆಗಳಿಗೆ ಕನ್ನ ಹಾಕುತ್ತಿದ್ದಾರೆ. ನೀವು ಶ್ರಮವಹಿಸಿ ಕೂಡಿಟ್ಟ ಹಣವನ್ನು ಕ್ಷಣದಲ್ಲಿ ದೋಚಲಿದ್ದಾರೆ. ಅಪರಿಚಿತರಿಂದ ಕರೆ ಬಂದಲ್ಲಿ ಯಾರು ಎಂಬುದನ್ನು ಖಚಿತಪಡಿಸಿಕೊಳ್ಳಿ. ಇಲ್ಲವೇ ಹತ್ತಿರದ ಬ್ಯಾಂಕ್ ಶಾಖೆಗೆ ತೆರಳಿ ಮಾಹಿತಿ ಪಡೆಯಬೇಕು. ಗ್ರಾಹಕರು ಎಚ್ಚರಿಕೆ ವಹಿಸುವುದರಿಂದ ಸೈಬರ್ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕಬಹುದು ಎಂದರು. ಮುಖ್ಯಶಿಕ್ಷಕಿ ಉಮಾ, ಸಹ ಶಿಕ್ಷಕ ಧರ್ಮೇಶ್, ಎಎಸ್ಐ ಶ್ರೀನಿವಾಸ್ ಮೂರ್ತಿ, ಮಹಿಳಾ ಕಾನ್ಸ್ಟೇಬಲ್ ವಾಣಿ, ಪೊಲೀಸ್ ಸಿಬ್ಬಂದಿ ವರ್ಗ ಹಾಗೂ ಇತರರು ಇದ್ದರು.

### ಮಕ್ಕಳಿಗೆ ಅಭಯ: ಮಾದರಿ ನಡೆ

ಜಿಲ್ಲೆಯಲ್ಲಿ ಇತ್ತೀಚೆಗೆ ಪೋಕ್ಸೋ ಪ್ರಕರಣ ಹೆಚ್ಚುತ್ತಿರುವುದರಿಂದ ಮಕ್ಕಳಿಗೆ ಕಾನೂನು ಅರಿವು ಮೂಡಿಸಲು ಹಾಗೂ ಆತ್ಮಸ್ಥೈರ್ಯ ತುಂಬಲು ಹಿರೀಸಾವೆ ಪೊಲೀಸರು ಮಕ್ಕಳನ್ನು ಠಾಣೆಗೆ ಕರೆಸಿ ಜಾಗೃತಿ ಮೂಡಿಸಿರುವುದು ಮೆಚ್ಚುಗೆಗೆ ಪಾತ್ರವಾಗಿದೆ.

ಖಾಸಗಿ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಲೈಂಗಿಕ ಅತ್ಯಾಚಾರಕ್ಕೆ ಒಳಗಾಗಿ ಮಗುವಿಗೆ ಜನ್ಮ ನೀಡಿರುವುದು ಆತಂಕ ಸೃಷ್ಟಿಸಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ವಿದ್ಯಾರ್ಥಿನಿಯರೊಂದಿಗೆ ಸಂವಾದ ಆರಂಭಿಸಿದ್ದಾರೆ.

> **ಪೊಲೀಸ್ ಠಾಣೆ ಹಾಗೂ ಅಧಿಕಾರಿಗಳನ್ನು ಕಂಡರೆ ಭಯಪಡುವ ಅಗತ್ಯವಿಲ್ಲ. ಜನಸ್ನೇಹಿ ಪೊಲೀಸ್ ವ್ಯವಸ್ಥೆ ಇದ್ದು ನಿಮ್ಮ ಸಹಕಾರ ಪಡೆದು ಉತ್ತಮ ಸೇವೆ ನೀಡುವ ಉದ್ದೇಶವಿದೆ. ಯಾವುದೇ ತೊಂದರೆ ಅಥವಾ ಅಪಾಯ ಎದುರಾದಲ್ಲಿ ಕೂಡಲೇ ನಮ್ಮ ಗಮನಕ್ಕೆ ತರಬೇಕು. ಇದರಿಂದ ಎಂತಹ ಕಠಿಣ ಸಮಸ್ಯೆ ಇದ್ದರೂ ನಿಭಾಯಿಸಿ ಕ್ರಮ ಕೈಗೊಳ್ಳಲು ಸಹಕಾರಿಯಾಗಲಿದೆ.**
>
> **- ರೂಪಾ ಬಿರಾದಾರ, ಹಿರೀಸಾವೆ ಪಿಎಸ್ಐ**

# ವಿದ್ಯಾರ್ಥಿಗಳ ಸಾರಿಗೆ ಸಮಸ್ಯೆ ಆಲಿಸಿದ ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಟ್ಟಾಯ ಹೋಬಳಿ ಶೆಟ್ಟಿಹಳ್ಳಿ ವೃತ್ತದ ಬಳಿ ಮನೆಗೆ ತೆರಳಲು ಸೂಕ್ತ ಸಮಯಕ್ಕೆ ಬಸ್ ಬಾರದೆ ಪರಿತಪಿಸುತ್ತಿದ್ದ ವಿದ್ಯಾರ್ಥಿಗಳ ಸಮಸ್ಯೆಗೆ ಶಾಸಕ ಸಿಮೆಂಟ್ ಮಂಜು ಸ್ಪಂದಿಸಿದ್ದಾರೆ. ಕಾರ್ಯನಿಮಿತ್ತ ಕಾರಿನಲ್ಲಿ ತೆರಳುತ್ತಿದ್ದ ಅವರು ರಸ್ತೆ ಬದಿಯಲ್ಲಿ ವಿದ್ಯಾರ್ಥಿಗಳು ನಿಂತಿರುವುದನ್ನು ಗಮನಿಸಿ ವಾಹನದಿಂದ ಇಳಿದು ವಿದ್ಯಾರ್ಥಿಗಳ ಬಳಿ ತೆರಳಿ ಅವರ ಸಮಸ್ಯೆಗಳನ್ನು ಆಲಿಸಿದರು. ಬಸ್‌ಗಳು ಸಮಯಕ್ಕೆ ಸರಿಯಾಗಿ ಸಂಚರಿಸದ ಕಾರಣ ವಿದ್ಯಾರ್ಥಿಗಳು ದಿನನಿತ್ಯ ತೊಂದರೆ ಅನುಭವಿಸುತ್ತಿರುವುದನ್ನು ವಿದ್ಯಾರ್ಥಿಗಳು ಶಾಸಕರಿಗೆ ವಿವರಿಸಿದರು.

ವಿದ್ಯಾರ್ಥಿಗಳ ಅಹವಾಲು ಆಲಿಸಿದ ಶಾಸಕರು, ತಕ್ಷಣವೇ ಕೆಎಸ್ಆರ್‌ಟಿಸಿ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಸೋಮವಾರದಿಂದ ಶೆಟ್ಟಿಹಳ್ಳಿ ವೃತ್ತದಲ್ಲಿ ಒಬ್ಬ ಟಿಕೆಟ್ ಕಲೆಕ್ಟರ್ (ಟಿ.ಸಿ) ನಿಯೋಜಿಸಿ, ಬಸ್‌ಗಳು ನಿಗದಿತ ಸಮಯಕ್ಕೆ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು.

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಂಧ್ರ ಪ್ರದೇಶದ ಬಪ್ಪಟ್ಲಾ ಜಿಲ್ಲೆಯ ಜಿಲ್ಲೆಲ್ಲಾ ಮುಡಿಯಲ್ಲಿ ಡಿ. 27 ರಿಂದ 29ರ ವರೆಗೆ ನಡೆಯಲಿರುವ ರಾಷ್ಟ್ರೀಯ ಯೋಗ ಚಾಂಪಿಯನ್ ಶಿಪ್ ಸ್ಪರ್ಧೆಗೆ ರಾಜ್ಯ ತಂಡ ಆಯ್ಕೆಯಾಗಿದ್ದು ಹಾಸನ ಜಿಲ್ಲಾ ಯೋಗ ಸಂಸ್ಥೆಯ 8 ಯೋಗ ಪಟುಗಳು ಆಯ್ಕೆಯಾಗಿದ್ದಾರೆ.




ನಾಗರಾಜ್, ಸಂಜಯ್, ಪಾಂಡು, ತೇಜ ರಾಜಶ್ರೀ, ಸಂಧ್ಯಾ, ನಾಗರತ್ನ, ಕೋಮಲ, ರಮ್ಯ ಅವರು ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಸಂಸ್ಥೆಯ ಉಪಾಧ್ಯಕ್ಷೆ ಕುಮುದ, ಅಣ್ಣಯ್ಯ, ಭಾನುಮತಿ, ಕಾರ್ಯದರ್ಶಿ ಜೆ.ಐ.ನಿರಂಜನ್ ರಾಜ್ ಅವರು ಪ್ರಯಾಣಕ್ಕೆ ಶುಭ ಹಾರೈಸಿದರು.

# ಸರ್ಕಾರದ ಸೌಲಭ್ಯ ಅರ್ಹರಿಗೆ ಸಕಾಲಕ್ಕೆ ತಲುಪಲಿ

## ಸಕಲೇಶಪುರದಲ್ಲಿ ರೈತ ದಿನಾಚರಣೆ | ಶಾಸಕ ಸಿಮೆಂಟ್ ಮಂಜು ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಲೆನಾಡು ಭಾಗದ ರೈತರ ಜೀವನ ಸಂಕಷ್ಟದಲ್ಲಿದೆ. ಕಾಡು ಪ್ರಾಣಿಗಳ ಹಾವಳಿ, ಅತಿವೃಷ್ಟಿ-ಅನಾವೃಷ್ಟಿಯಿಂದ ರೈತರು ಕಂಗಾಲಾಗಿದ್ದಾರೆ. ಯಾವ ಕಾಲಕ್ಕೆ ಯಾವ ಬೆಳೆಗಳನ್ನು ಬೆಳೆಯಬೇಕು, ಬೆಳೆದ ಬೆಳೆಗಳಿಗೆ ಯಾವ ರೀತಿಯ ಉತ್ತಮ ದರವನ್ನು ಪಡೆದುಕೊಳ್ಳಬೇಕು ಎಂಬ ಮಾಹಿತಿಯನ್ನು ಕೃಷಿ





ಅಧಿಕಾರಿಗಳು ರೈತರಿಗೆ ತಿಳಿಸಬೇಕು. ಜೊತೆಗೆ ಸರ್ಕಾರದಿಂದ ರೈತರಿಗೆ ಸಿಗುವ ಸೌಲಭ್ಯಗಳನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕೃಷಿಕ ಸಮಾಜ, ಕೃಷಿ ಇಲಾಖೆ, ಸಂಘಸಂಸ್ಥೆಗಳ ಸಹಯೋಗದಲ್ಲಿ ಪಟ್ಟಣದ ಟಿಎಪಿಸಿಎಂಎಸ್ ರೈತ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ರೈತ ದಿನಾಚರಣೆಯಲ್ಲಿ ಮಾತನಾಡಿ, ರೈತ ದೇಶದ ಬೆನ್ನೆಲುಬು. ಒಂದು ದೇಶ ಸಮೃದ್ಧಿಯಾಗಿ ಮುಂದುವರೆಯಬೇಕಾದರೆ ಅಲ್ಲಿ ರೈತರ ಜೀವನ ನೆಮ್ಮದಿಯಿಂದ ಕೂಡಿರಬೇಕು. ದೇಶದ ರಾಷ್ಟ್ರಪತಿ, ಪ್ರಧಾನಮಂತ್ರಿ ಸೇರಿದಂತೆ ಉನ್ನತ ಹುದ್ದೆಯಲ್ಲಿರುವ ಅನೇಕ ವ್ಯಕ್ತಿಗಳ ಹಿಂದಿನ ತಲೆಮಾರಿನವರು ರೈತರಾಗಿದ್ದಾರೆ. ಮೋಸವಂಚನೆ ಮಾಡದ ಉದ್ಯಮ ಎಂದರೆ ಅದು ಕೃಷಿ ಉದ್ಯಮ. ಇಂತಹ ಉದ್ಯಮ ಇತ್ತೀಚಿನ ದಿನಗಳಲ್ಲಿ ಸಂಕಷ್ಟದಲ್ಲಿದ್ದರೂ, ಮುಂದಿನ ದಿನಗಳಲ್ಲಿ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಜನರು ಹುಡುಕಿಕೊಂಡು ಬರುವಂತಹ ಸನ್ನಿವೇಶ ಎದುರಾಗಲಿದೆ ಎಂದರು.

ಸಕಲೇಶಪುರ ತಾಲ್ಲೂಕಿನಲ್ಲಿ ಕಾಫಿ ಕುಯ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೊರರಾಜ್ಯಗಳ ಕಾರ್ಮಿಕರು ಹಾಗೂ ಬಾಂಗ್ಲಾದೇಶದವರು ಆಗಮಿಸುತ್ತಿದ್ದಾರೆ. ಈ ಕುರಿತು ಕಾಫಿ ಬೆಳೆಗಾರರು ಎಚ್ಚರಿಕೆ ವಹಿಸಬೇಕು. ಕಾರ್ಮಿಕರ ಗುರುತಿನ ಚೀಟಿ ಪಡೆದುಕೊಳ್ಳಬೇಕು. ಅನುಮಾನಾಸ್ಪದ ವ್ಯಕ್ತಿಗಳಾಗಿದ್ದರೆ ಅಥವಾ ಗುರುತಿನ ಚೀಟಿ ಹೊಂದಿಲ್ಲದವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಕರೆ ನೀಡಿದರು.

ತಾಲ್ಲೂಕು ಕೃಷಿ ಸಹಾಯಕ ಅಧಿಕಾರಿ ಯು.ಎಂ. ಪ್ರಕಾಶ್ ಮಾತನಾಡಿ, ಭಾರತದ 5ನೇ ಪ್ರಧಾನಮಂತ್ರಿ ಚೌಧರಿ ಚರಣ್ ಸಿಂಗ್ ಅವರ ಸ್ಮರಣಾರ್ಥ ಡಿ. 23 ಅನ್ನು ಪ್ರತಿವರ್ಷ ರಾಷ್ಟ್ರೀಯ ರೈತರ ದಿನ ಅಥವಾ ಕಿಸಾನ್ ದಿವಸ್ ಎಂದು ಆಚರಿಸಲಾಗುತ್ತದೆ. ಅವರು ಜುಲೈ 1979ರಿಂದ ಜನವರಿ 1980ರ ವರೆಗೆ ಪ್ರಧಾನಮಂತ್ರಿಯಾಗಿದ್ದರು. ಈ ಅವಧಿಯಲ್ಲಿ ರೈತರ ಕಲ್ಯಾಣಕ್ಕಾಗಿ ತಂದ ಯೋಜನೆಗಳು ಇಂದಿಗೂ ಜನಪ್ರಿಯವಾಗಿವೆ. ರೈತಪರ ಯೋಜನೆಗಳನ್ನು ಜಾರಿಗೆ ತಂದಿದ್ದಕ್ಕಾಗಿ ಅವರ ನೆನಪಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ ಎಂದರು.

### 6 ಸಾವಿರ ರೈತರಿಗೆ ಮಾಹಿತಿ ರವಾನೆ

ರೈತರ ದಿನಾಚರಣೆಯನ್ನು ಆಚರಿಸುವ ಮೂಲಕ ರೈತರೆಲ್ಲ ಒಂದೇ ವೇದಿಕೆಯಲ್ಲಿ ಸೇರಿ ಸರ್ಕಾರದ ಸೌಲಭ್ಯಗಳ ಬಗ್ಗೆ ತಿಳಿದುಕೊಳ್ಳಬಹುದು. ಕಳೆದ ಎರಡು ವರ್ಷಗಳಿಂದ ಸಕಲೇಶಪುರ ಕೃಷಿ ಇಲಾಖೆ ಸರ್ಕಾರದ ಸೌಲಭ್ಯಗಳು ನೇರವಾಗಿ ರೈತರಿಗೆ ತಲುಪುವ ನಿಟ್ಟಿನಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಅಳವಡಿಸಿದೆ. ತಾಲ್ಲೂಕಿಗೆ ಎಷ್ಟು ಅನುದಾನ ಬಂದಿದೆ, ಅದನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ ಎಂಬ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ. ತಾಲ್ಲೂಕಿನ 221 ಹಳ್ಳಿಗಳ 6,000 ರೈತರಿಗೆ ಏಕಕಾಲದಲ್ಲಿ ವಾಟ್ಸಾಪ್ ಮೂಲಕ ಸರ್ಕಾರದ ಸೌಲಭ್ಯಗಳ ಮಾಹಿತಿ ತಲುಪಿಸಲಾಗುತ್ತಿದೆ ಎಂದರು.

ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮುರುಳಿ ಮೋಹನ್ ಮಾತನಾಡಿ, ನಾವು ಪ್ರತಿದಿನ ತಿನ್ನುವ ಅನ್ನದಲ್ಲಿ ರೈತರ ಬೆವರು ಸೇರಿದೆ. ಇಂತಹ ರೈತರನ್ನು ನಾವು ಪೂಜಿಸಬೇಕು. ಯಾವುದೇ ಉದ್ಯಮ ಆರಂಭಿಸಿದವರು ನಷ್ಟವಾದರೆ ಅದನ್ನು ಬಿಟ್ಟುಬಿಡುತ್ತಾರೆ. ಆದರೆ ರೈತರು ಎಷ್ಟೇ ನಷ್ಟವಾದರೂ ತಮ್ಮ ಉದ್ಯಮವನ್ನು ಬಿಟ್ಟುಬಿಡದೆ ಮುಂದುವರಿಸಿ ಮುಂದಿನ ತಲೆಮಾರಿಗೆ ಹಸ್ತಾಂತರಿಸುತ್ತಾರೆ. ಈ ಭಾಗದಲ್ಲಿ ಸಣ್ಣ ಹಿಡುವಳಿದಾರರೇ ಹೆಚ್ಚಿದ್ದು, ಅವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳು ಬಗೆಹರಿಯುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯಲು ಪಕ್ಷಾತೀತವಾಗಿ ಎಲ್ಲರೂ ಪಾಲ್ಗೊಳ್ಳಬೇಕು ಎಂದರು.

### ಅನ್ನದಾತರಿಗೆ ಗೌರವ ಕೊಡಬೇಕು

ಸರ್ಕಾರಿ ಕಚೇರಿಗಳಲ್ಲಿ ರೈತರು ತಮ್ಮ ಕೆಲಸಗಳಿಗಾಗಿ ಪ್ರತಿದಿನ ಅಲೆಯುವಂತಾಗಬಾರದು. ಯಾವುದೇ ರೈತ ಸರ್ಕಾರಿ ಕಚೇರಿಗೆ ಬಂದಾಗ ಅಧಿಕಾರಿಗಳು ರೈತರನ್ನು ಕೂರಿಸಿಕೊಂಡು ಮಾತಾಡಬೇಕು. ಇದು ರೈತರಿಗೆ ನೀಡುವ ಗೌರವವಾಗಿದೆ. ಒಬ್ಬ ರೈತ ಒಂದು ದಿನದ ಕೆಲಸವನ್ನು ಬಿಟ್ಟು ಸರ್ಕಾರಿ ಕಚೇರಿಗೆ ಬಂದರೆ ಅದು ರೈತರ ಕುಟುಂಬಕ್ಕೆ ಮಾತ್ರವಲ್ಲ, ದೇಶಕ್ಕೂ ನಷ್ಟ. ರೈತರು ತಮ್ಮ ಬೆಳೆಗಳಿಗೆ ಬೆಂಬಲ ಬೆಲೆಗಾಗಿ ಹೋರಾಟವನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಕೊನೆಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯಾದಗಿರಿಯಲ್ಲಿ ಡಿ. 28 ರಿಂದ 30ರ ವರೆಗೆ ನಡೆಯಲಿರುವ ಐದನೇ ವೈಜ್ಞಾನಿಕ ಸಮ್ಮೇಳನಕ್ಕೆ ಹಾಸನ ಜಿಲ್ಲೆಯಿಂದ ಹೆಚ್.ಎನ್.ಪ್ರಶಸ್ತಿಗೆ ಆಯ್ಕೆಯಾಗಿರುವ ವಕೀಲ ಹಾಗೂ ರಂಗಭೂಮಿ ಕಲಾವಿದ ಕೆ.ವಿ. ಯೋಗೀಶ ಮತ್ತು ಚೈತನ್ಯಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಎನ್‌ಎಸ್‌ಎಸ್ ಅಧಿಕಾರಿ ನಿಚಿತಾ ಕುಮಾರಿ ಅವರನ್ನು ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನಿಂದ ಅಭಿನಂದಿಸಿ ಸಮ್ಮೇಳನಕ್ಕೆ ಅಧಿಕೃತ ಆಹ್ವಾನ ನೀಡಲಾಯಿತು. ಪರಿಷತ್ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ನಿರ್ದೇಶಕಿ ವಿ.ಎಸ್. ರಾಣಿ, ಪದಾಧಿಕಾರಿಗಳಾದ ಜಿ. ಕುಮಾರ್, ಕತ್ತಿಮಲ್ಲೇನಹಳ್ಳಿ ಪರಮೇಶ್, ಕಲ್ಲಹಳ್ಳಿ ಹರೀಶ್, ದಂತ ವೈದ್ಯೆ ಡಾ. ಜಿ. ಕಾವ್ಯ ಮತ್ತಿತರರಿದ್ದರು.






# ಸರ್ಕಾರಿ ಶಾಲೆಗಳಿಗೆ ಸೌಕರ್ಯ ಕಲ್ಪಿಸಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ತುಡಿಯುವ ಸಂಘ-ಸಂಸ್ಥೆಗಳು ಹಾಗು ಶ್ರೀಮಂತರು ಅಗತ್ಯ ಸೌಲಭ್ಯಗಳೊಂದಿಗೆ ಹೆಚ್ಚಿನ ಸಹಕಾರ ನೀಡುವ ಮೂಲಕ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಮುಂದಾಗಬೇಕು ಎಂದು ಮೆಂಡ ಫೌಂಡೇಷನ್ ವ್ಯವಸ್ಥಾಪಕ ವಿ.ಎಸ್. ಸದಾಶಿವ ಹೇಳಿದರು.

ತಾಲ್ಲೂಕಿನ ಮೂಕಿಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೆಂಗಳೂರಿನ ಮೆಂಡ ಫೌಂಡೇಷನ್ ಹಾಗೂ ಸೆಲ್ಕೋ ಸೋಲಾರ್ ಕಂಪನಿಯಿಂದ 1.20 ಲಕ್ಷ ರೂ.



ಮೌಲ್ಯದ ಸ್ಮಾರ್ಟ್ ಕ್ಲಾಸ್ ಪರಿಕರ ವಿತರಿಸಿ ಮಾತನಾಡಿ, ಆಧುನಿಕ ತಂತ್ರಜ್ಞಾನ ಪರಿಕರಗಳನ್ನು ಕಲ್ಪಿಸುವ ಮೂಲಕ ಸರ್ಕಾರಿ ಶಾಲೆಗಳ ಶೈಕ್ಷಣಿಕ ವ್ಯವಸ್ಥೆಯ ಬಲವರ್ಧನೆ ಮಾಡುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಈಗಾಗಲೇ ಅನೇಕ ಸರ್ಕಾರಿ ಶಾಲೆಗಳಿಗೆ ನೆರವು ನೀಡಲಾಗಿದೆಯೆಂದರು. ಎಸ್‌ಡಿಎಂಸಿ ಅಧ್ಯಕ್ಷೆ ಮಣಿ ಅವರು ಮಾತನಾಡಿ, ಹಾಜರಾತಿ ಕೊರತೆ ಸೇರಿ ಮತ್ತಿತರ ಕಾರಣಗಳಿಂದ ನೂರಾರು ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿವೆ. ಹಿರಿಯ ವಿದ್ಯಾರ್ಥಿಗಳು ಸಂಘ ಸ್ಥಾಪನೆ ಮಾಡಿಕೊಂಡು ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಎನ್.ದೀಪಾ, ಸಮನ್ವಯಧಿಕಾರಿ ಅನಿಲ್, ಶಿಕ್ಷಣ ಸಂಯೋಜಕ ಶ್ರೀನಿವಾಸ್ ಹಾಗು ಸಿಆರ್‌ಪಿ ಮಂಜುನಾಥ್, ಮುಖ್ಯ ಶಿಕ್ಷಕ ಜೆ.ಹೆಚ್. ಶ್ರೀಕಾಂತ್, ಸಹ ಶಿಕ್ಷಕ ಕೆಂಪೇಗೌಡ, ಸೌಮ್ಯ, ಕುಮಾರ್, ರಮ್ಯ, ಮೆಂಡ ಫೌಂಡೇಷನ್ ಸಿಬ್ಬಂದಿ ಹಾಗೂ ಇತರರಿದ್ದರು.

# ಬಸ್ ದುರಂತದಲ್ಲಿ ಪುತ್ರಿಯರ ಸಾವು: ಮಡುಗಟ್ಟಿದ ದು:ಖ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಚಿತ್ರದುರ್ಗದ ಗೋರ್ಲತ್ತು ಬಳಿ ಗುರುವಾರ ತಡರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮದುವೆ ನಿಶ್ಚಯ ಆಗಿದ್ದ ಮಗಳನ್ನು ಕಳೆದುಕೊಂಡ ಹೆತ್ತವರು ಹಾಗೂ ಕುಟುಂಬ ಸದಸ್ಯರ ದುಃಖ ಮಡುಗಟ್ಟಿದೆ.

ತಾನು ಪ್ರಯಾಣಿಸುತ್ತಿದ್ದ ಬಸ್ ಹೊತ್ತಿಕೊಂಡು ಸಜೀವ ದಹನವಾದ ತಾಲೂಕಿನ ಅಂಕನಹಳ್ಳಿಯ ಯುವತಿ ನವ್ಯಾ ಮನೆಯಲ್ಲಿ ಸೂತಕ ಆವರಿಸಿದೆ. ಬೆಳೆದು ನಿಂತ ಮಗಳ ನೆನೆದು ತಂದೆ ಮಂಜಪ್ಪ ಕಣ್ಣೀರಿಡುತ್ತಿದ್ದಾರೆ.

ಖಾಸಗಿ ಬಸ್‌ನಲ್ಲಿ ನನ್ನ ಮಗಳು ನವ್ಯಾ ಜೊತೆಗೆ ಇದೇ ತಾಲೂಕಿನ ಮಾನಸ ಹಾಗೂ ಮಿಲನ ಮೂವರು ಒಟ್ಟಿಗೇ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ದುರಂತದಲ್ಲಿ ಮಿಲನ ಬದುಕಿದ್ದು, ಅವರೇ ನಮಗೆ ಫೋನ್ ಮಾಡಿ ವಿಷಯ ತಿಳಿಸಿದರು.

ನಂತರ ಆಸ್ಪತ್ರೆಗೆ ತೆರಳಿ ಮಗಳಿಗಾಗಿ ಹುಡುಕಾಡಿದೆ, ಎಲ್ಲೂ ಮಗಳು ಕಾಣಲೇ ಇಲ್ಲ ಎಂದು ಗಳಗಳನೆ ಅತ್ತರು. ನಮ್ಮ



ಮಗಳು ಹಾಗೂ ಮಾನಸ ಗುರುತು ಹಿಡಿಯಲಾಗದಷ್ಟು ಸಂಪೂರ್ಣ ಸುಟ್ಟು ಹೋಗಿದ್ದಾರೆ. ಆರಂಭದಲ್ಲಿ ಮೃತದೇಹ ಕಂಡು ಹಿಡಿಯಲು ಆಗಲಿಲ್ಲ ಎಂದು ಕಣ್ಣೀರಿಟ್ಟರು.

ಮಾನಸ ಹಾಗೂ ನವ್ಯಾ ಒಂದೇ ಕಾಲೇಜಲ್ಲಿ ಓದಿದ್ದು, ಒಂದೇ ರೀತಿಯ ಬಟ್ಟೆ ಧರಿಸುತ್ತಿದ್ದರು. ಒಂದೇ ರೀತಿಯ ಆಭರಣ ಧರಿಸುತ್ತಿದ್ದರು. ಒಟ್ಟಿಗೆ ಇದ್ದು, ಒಂದೇ ಕಡೆ ಕೆಲಸ ಮಾಡುತ್ತಿದ್ದರು. ಇಬ್ಬರ ನಡುವೆ ಅಷ್ಟೊಂದು ಬಾಂಧವ್ಯ ಇತ್ತು. ಒಡ ಹುಟ್ಟಿದವರಿಗಿಂತಲೂ ಹೆಚ್ಚಾಗಿ ಸಲುಗೆಯಿಂದಿದ್ದರು. ಎಲ್ಲಿಗೇ ಹೋಗಲಿ, ಊರಿಗೆ ಬರಲಿ ಒಟ್ಟಿಗೆ ಓಡಾಡೋರು. ಅವರಿಬ್ಬರೂ ಒಟ್ಟಿಗೇ ಇದ್ದದ್ದು ನಮಗೂ ಧೈರ್ಯ ಇತ್ತು. ಬಹುಶಃ ಇವರು ಒಟ್ಟಾಗಿ ಇದ್ದುದು ಆ ದೇವರಿಗೂ ಸಹಿಸಿಲ್ಲವೇನೋ, ಇದೀಗ ಜೊತೆಯಲ್ಲೇ ಶಾಶ್ವತವಾಗಿ ಇಲ್ಲವಾಗಿದ್ದಾರೆ ಎಂದು ತೀವ್ರ ಭಾವುಕರಾದರು.

ಎರಡು ವರ್ಷದಿಂದ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದು, ಮಾರತ್ ಹಳ್ಳಿಯಲ್ಲಿ ವಾಸವಿದ್ದರು. ಮುಂದಿನ ವರ್ಷ ಏಪ್ರಿಲ್ 28–29ಕ್ಕೆ ಮದುವೆ ನಿಶ್ಚಯ ಮಾಡಿದ್ದೆವು. ಮದುವೆಗೆ ಎಲ್ಲಾ ತಯಾರಿ ನಡೆದಿತ್ತು. ಜನವರಿ 25ಕ್ಕೆ ಬೆಂಗಳೂರಿನಲ್ಲಿ ನಿಶ್ಚಿತಾರ್ಥ ಮಾಡಬೇಕಿತ್ತು. ರಾತ್ರಿ 8 ಗಂಟೆಗೆ ಬಸ್ ಹತ್ತಿದಾಗ ಫೋನ್ ಮಾಡಿ ಮಗಳು ಮಾತನಾಡಿದ್ದಳು.ಅದೇ ಕೊನೆಯ ಮಾತು ಎಂದು ಕಣ್ಣೀರಿಟ್ಟರು. ಒಟ್ಟನಲ್ಲಿ ನವುರಾದ ಹುಡುಗಿ ನವ್ಯಾ ಬಗ್ಗೆ ಏನೆಲ್ಲ ಕನಸು ಕಟ್ಟಿಕೊಂಡಿದ್ದವರು ಈಗ ಒಂದೇ ಸಮನೆ ಕಣ್ಣೀರಿಡುತ್ತಿದ್ದಾರೆ.

# ಡಿ. 29ಕ್ಕೆ ಹಾಸನದಲ್ಲಿ ಜೆಡಿಎಸ್ ಪ್ರಮುಖರ ಸಭೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಡಿ. 29 ರಂದು ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಜೆಡಿಎಸ್ ಪ್ರಮುಖರ ಸಭೆ ನಡೆಯಲಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಸೋಮವಾರ ಬೆಳಿಗ್ಗೆ 11 ಗಂಟೆಗೆ ಆರಂಭವಾಗುವ ಸಭೆಯಲ್ಲಿ ಪಕ್ಷದ ಹಾಲಿ, ಮಾಜಿ ಶಾಸಕರು, ಕಳೆದ ವಿಧಾನಸಭೆ ಚುನಾವಣೆಯ ಪರಾಜಿತ ಅಭ್ಯರ್ಥಿಗಳು, ಜಿಪಂ ಮಾಜಿ ಅಧ್ಯಕ್ಷರು, ಸದಸ್ಯರು, ತಾಪಂ ಮಾಜಿ ಅಧ್ಯಕ್ಷರು, ಸದಸ್ಯರು ಗ್ರಾಪಂ ಅಧ್ಯಕ್ಷ ಹಾಗೂ ಸದಸ್ಯರು, ಡಿಸಿಸಿ ಬ್ಯಾಂಕ್ ಹಾಗೂ ಅದರ ಅಡಿಯಲ್ಲಿ ಬರುವ ಸಹಕಾರ ಸಂಘಗಳ ಅಧ್ಯಕ್ಷರು ಸದಸ್ಯರು, ನಮ್ಮ ಪಕ್ಷದಿಂದ ಗೆದ್ದಿ ವಿವಿಧ ಹುದ್ದೆ ಅಲಂಕರಿಸಿದವರು ಸೇರಿ ಸುಮಾರು 2–3 ಸಾವಿರ ಮಂದಿ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

2026 ಏಪ್ರಿಲ್–ಮೇನಲ್ಲಿ ತಾಪಂ–ಜಿಪಂ ಚುನಾವಣೆ ನಡೆಯಲಿದೆ. ಅಂತೆಯೇ ಗ್ರಾಪಂ ಚುನಾವಣೆಯನ್ನೂ ನಾವು ಎದುರಿಸಬೇಕಿದೆ. ಅದಕ್ಕಾಗಿ ಕಾರ್ಯಕರ್ತರನ್ನು ಹುರಿದುಂಬಿಸಲು ಸ್ವತಃ ದೇವೇಗೌಡರೇ ಅಖಾಡಕ್ಕೆ ಇಳಿಯುತ್ತಿದ್ದಾರೆಂದರು.

ಎದುರಾಳಿ ಪಕ್ಷದವರು ಎಷ್ಟೇ ಸಮಾವೇಶ ಮಾಡಿದರೂ, ಹಾಸನ ಜಿಲ್ಲೆ ಜೆಡಿಎಸ್‌ನ ಗಟ್ಟಿ ನೆಲೆ, ನೆಲ. ಹೇಳಿ ಕೇಳಿ ಈ ಜಿಲ್ಲೆ ದೇವೇಗೌಡರ ಜನ್ಮಸ್ಥಳ ಜೊತೆಗೆ ಕಾರ್ಯಕ್ಷೇತ್ರ.




ಹೀಗಾಗಿ ಪಕ್ಷಕ್ಕೆ ಸದಾ ಬಲ, ಚೈತನ್ಯ ನೀಡುವ ದೊಡ್ಡ ಪಡೆಯೇ ಇದೆ, ಅದೀಗ ಅಣಿಯಾಗುತ್ತಿದೆ ಎಂದು ತಿಳಿಸಿದರು.

ದೇವೇಗೌಡರು, ರೇವಣ್ಣ, ಕುಮಾರಸ್ವಾಮಿ ಅವರು ಈ ಜಿಲ್ಲೆಗೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ. ಅದು ನಮ್ಮ ಕೈ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜನರ ಆಶೀರ್ವಾದ ಇರೋವರೆಗೂ ನಮ್ಮ ಪಕ್ಷ ಗಟ್ಟಿಯಾಗಿರಲಿದೆ. ಇದನ್ನು ಮತ್ತಷ್ಟು ಬಲಗೊಳಿಸಲು ಜನವರಿಯಲ್ಲಿ ಬೃಹತ್ ಸಮಾವೇಶ ನಡೆಸಲು ಯೋಜಿಸಲಾಗಿದೆ ಎಂದರು.

ಮುಖಂಡ ಹೊನ್ನವಳ್ಳಿ ಸತೀಶ್ ಮಾತನಾಡಿ, ರೇವಣ್ಣ ಅವರು ಜಿಲ್ಲೆಯ ಅಭಿವೃದ್ಧಿ ಜೊತೆಗೆ ರೈತ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಎಲ್ಲರೂ ಸಹಕಾರ ನೀಡಬೇಕು ಎಂದು ವಿನಂತಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಗಿರೀಶ್ ಚನ್ನವೀರಪ್ಪ, ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ದ್ಯಾವೇಗೌಡ, ಆಲೂರು ತಾ.ಅಧ್ಯಕ್ಷ ಕೆ.ಎಸ್.ಮಂಜೇಗೌಡ, ಮುಖಂಡರಾದ ಸತೀಶ್ ಹೊನ್ನವಳ್ಳಿ, ಸಮೀರ್ ಅಹಮದ್ ಹಾಗೂ ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ ಇದ್ದರು.

# ಡಿ. 27ರಂದು ಆಲೂರಿನಲ್ಲಿ ಪ್ರತಿಭಾ ಪುರಸ್ಕಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ರಾಧಮ್ಮ ಜನ ಸ್ಪಂದನ ವತಿಯಿಂದ ತಾಲೂಕಿನ ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ 5ನೇ ವರ್ಷದ ಪ್ರತಿಭಾ ಪುರಸ್ಕಾರ ಮತ್ತು ಹಿತವಚನ ಕಾರ್ಯಕ್ರಮ ಡಿ. 27ರಂದು ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಶಾಸಕ ಸಿಮೆಂಟ್ ಮಂಜು ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ. ಪ್ರಾಣೇಶ್ ಅವರ ಉಪಸ್ಥಿತಿಯಲ್ಲಿ ಶಾಸಕ ಹೆಚ್.ಕೆ. ಸುರೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪರಿಸರಕ್ಕಾಗಿ ನಾವು ಸಂಘಟನೆ ರಾಜ್ಯಾಧ್ಯಕ್ಷ ಎ.ಟಿ. ರಾಮಸ್ವಾಮಿ, ಆರೋಗ್ಯ ರಕ್ಷಾ ಸದಸ್ಯತ್ವಕ್ಕೆ ಹಾಸನ ಹೆಚ್‌ಕೆಎಸ್ ಇಂಟರ್‌ನ್ಯಾಷನಲ್ ಶಾಲೆಯ ಕೋಮಲ ಹೆಚ್.ಕೆ. ಸುರೇಶ್ ಚಾಲನೆ ನೀಡುವರು.

ಮಾಜಿ ಶಾಸಕ ಪುಟ್ಟೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಬಾಗೂರು ಮಂಜೇಗೌಡ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿಭಾಗ ಕಾರ್ಯವಾಹ ಹಾಗೂ ವಕೀಲ ವಿಜಯ್‌ಕುಮಾರ್, ರಾಧಮ್ಮ ಜನಸ್ಪಂದನ ಅಧ್ಯಕ್ಷ ಬಿ.ಎನ್. ಹೇಮಂತಕುಮಾರ್ ಭಾಗವಹಿಸಲಿದ್ದಾರೆ.



ಕನ್ನಡಪ್ರಭ-ಸುವರ್ಣ ವಾಹಿನಿ-ಜನಮಿತ್ರ ಪತ್ರಿಕೆ-ಕರ್ನಾಟಕ ಅರಣ್ಯ ಇಲಾಖೆ ಹಾಗೂ ಸಕಲೇಶಪುರದ ಲಯನ್ಸ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ಕಲಾಕುಂಚ ಚಿತ್ರಕಲಾ ಸ್ಪರ್ಧೆಯ ಮುಖ್ಯ ತೀರ್ಪುಗಾರರಾಗಿದ್ದ ಖ್ಯಾತ ಕಲಾವಿದೆ ಹಾಗೂ ವಿಮರ್ಶಕಿ ಕೃತಿ ಪ್ರಜ್ವಲ್ ಅವರನ್ನು ಅಭಿನಂದಿಸಲಾಯಿತು.

# ಪರಿಣಾಮಕಾರಿ ಬೋಧನೆಯಿಂದ ಮಕ್ಕಳ ಕಲಿಕಾ ಸಾಮರ್ಥ್ಯ ವೃದ್ಧಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಕ್ಕಳ ಕಲಿಕಾ ಸಾಮರ್ಥ್ಯ ಅರಿತು ಅವರೊಂದಿಗೆ ಮಗುವಾಗಿ ಬೆರೆತು ಪಾಠ ಮಾಡಿದರೆ ಅದು ಪರಿಣಾಮಕಾರಿಯಾಗಿರುತ್ತದೆ ಎಂದು ಸಾಣೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಪ್ರಭಾರ ಮುಖ್ಯ ಶಿಕ್ಷಕಿ ಜಿ.ಎಸ್. ಸುಹಾಸಿನಿ ಅಭಿಪ್ರಾಯಪಟ್ಟರು.

ತಾಲೂಕಿನ ಸಾಣೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ ಶಾಲಾ ವಾರ್ಷಿಕೋತ್ಸವದಲ್ಲಿ ಮಾತನಾಡಿ, ನಮ್ಮ ಶಾಲೆಗಳಲ್ಲಿ ಇಲಾಖೆಯ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರೊಂದಿಗೆ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬೆಳೆಸಲಾಗುತ್ತಿದೆ. ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಎಲ್ಲರೂ ಶಕ್ತಿಮೀರಿ ಶ್ರಮಿಸುತ್ತಿದ್ದಾರೆ ಎಂದರು.

ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಾ.ನಂ. ಲೋಕೇಶ್ ಮಾತನಾಡಿ, ಗ್ರಾಮೀಣ ಪ್ರದೇಶದ ಮುಗ್ಧ ಮಕ್ಕಳಿಗೆ ಪ್ರೋತ್ಸಾಹದಾಯಕ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಸೇವಾ ನಿಷ್ಠೆ ತೋರಿಸಬೇಕು. ಪ್ರತಿ ಮಕ್ಕಳು ಒಂದಿಲ್ಲೊಂದು ಪ್ರತಿಭೆ ಹೊಂದಿರುತ್ತಾರೆ. ಅದನ್ನು ಹೆಕ್ಕಿ ತೆಗೆದು ಪ್ರದರ್ಶನಕ್ಕೆ ವೇದಿಕೆ ನಿರ್ಮಾಣ ಮಾಡಿಕೊಟ್ಟರೆ ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ನಾಂದಿ ಹಾಡಿದಂತಾಗುತ್ತದೆ. ಇಂತಹ ಉತ್ತಮ ಕೆಲಸ ಸಾಣೇನಹಳ್ಳಿ ಶಾಲೆಯ ಶಿಕ್ಷಕರಿಂದ ಆಗುತ್ತಿದೆ. ಮಕ್ಕಳ ಮಾನಸಿಕ, ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಇಲ್ಲಿನ ಸಿಬ್ಬಂದಿ ಶ್ರಮ ವಹಿಸಿ ಕೆಲಸ ಮಾಡುತ್ತಿದ್ದಾರೆ ಎಂದು ಮಾರ್ಮಿಕವಾಗಿ ನುಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರ ನಾಯಕರಹಳ್ಳಿ ಮಾತನಾಡಿ, ಶಾಲೆಗಳ ಸಬಲೀಕರಣವಾಗಲು ಪೋಷಕರು ಹಾಗೂ ಸಮುದಾಯ ಕೈ ಜೋಡಿಸಬೇಕು. ಉತ್ತಮ ಶಿಕ್ಷಕರಿರುವ ಶಾಲೆ ಪ್ರಜ್ವಲಿಸುತ್ತದೆ. ಸೇವಾ ವೃತ್ತಿ ಎನಿಸಿಕೊಂಡಿರುವ ಶಿಕ್ಷಕ ವೃತ್ತಿಯನ್ನು ದೇವರ ಪೂಜೆಯಂತೆ ನಿಷ್ಠೆಯಿಂದ ಮಾಡುವ ಶಿಕ್ಷಕರು ಸರ್ಕಾರಿ ಶಾಲೆಯಲ್ಲಿ ಕಾರ್ಯತತ್ಪರರಾಗಿದ್ದಾರೆ ಎಂದರು.

ಆಚಾರ್ಯ ಕಾಮರ್ಸ್ ಕಾಲೇಜಿನ ಪ್ರಾಂಶುಪಾಲ ಡಾ. ಆದರ್ಶ ಮಾತನಾಡಿ, ಹಳ್ಳಿಯಲ್ಲಿ ಬೆಳೆದವರೇ ದೆಹಲಿ ವರೆಗೆ ಹೋಗುವುದರೊಂದಿಗೆ ಅಲ್ಲಿ ತನ್ನ ಛಾಪು ಮೂಡಿಸುವ ಪ್ರತಿಭಾವಂತರಾಗುತ್ತಾರೆ. ಜನಿಸಿದ ಯಾವ ಮಕ್ಕಳು ದಡ್ಡರಲ್ಲ, ಎಲ್ಲರನ್ನೂ ಬುದ್ದಿವಂತರನ್ನಾಗಿ ಮಾಡುವ ಶಕ್ತಿ ಶಿಕ್ಷಕರಿಗಿದೆ ಎಂಬುದು ಈ ಶಾಲೆಯ ಶಿಕ್ಷಕರಿಂದ ಗೋಚರವಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ನಿಕಟಪೂರ್ವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ ಮಾತನಾಡಿ, ಶಿಕ್ಷಕರು ಮತ್ತು ಮಕ್ಕಳ ನಡುವಿನ ಆರೋಗ್ಯಕರ ಬಾಂಧವ್ಯ ಬೆಳೆಯಲು ಪೋಷಕರು ಸಹಕಾರಿಯಾಗಿದ್ದಾರೆ ಎಂದರು.

ಶಿಕ್ಷಕ ಸುರೇಶ ಮತ್ತು ಕುಮಾರಸ್ವಾಮಿ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ವಿದ್ಯಾರ್ಥಿಗಳಿಂದ ನಡೆದ ನೃತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಮನಗೆದ್ದಿತು.

ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷೆ ವಿಂಧ್ಯಾ ರಾಣಿ ವಹಿಸಿದ್ದರು. ಶಿಕ್ಷಕರಾದ ಕೆ.ಎಸ್. ಸುರೇಶ್, ಕುಮಾರಸ್ವಾಮಿ, ಎಸ್‌ಡಿಎಂಸಿ ಉಪಾಧ್ಯಕ್ಷ ಪುಟ್ಟರಾಜು, ಪ್ರೌಢ ಶಾಲಾ ಶಿಕ್ಷಕ ಮಂಜುನಾಥ್, ಶಿಕ್ಷಕರ ಸಂಘದ ಉಪಾಧ್ಯಕ್ಷ ಗುಡುಗನಹಳ್ಳಿ ಮಂಜುನಾಥ್ ಹಾಗೂ ಇತರರಿದ್ದರು.

# ಮಕ್ಕಳ ಗ್ರಾಮಸಭೆ: ಹಾಸನ ಜಿಲ್ಲೆ ಲಾಸ್ಟ್

## ಕಾಗದಕ್ಕಷ್ಟೇ ಸೀಮಿತವಾದ ಮಹತ್ತರ ಯೋಜನೆ | ಜನಪ್ರತಿನಿಧಿಗಳಿಂದಲೂ ನಿರ್ಲಕ್ಷ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಕ್ಕಳ ಹಕ್ಕುಗಳು ಮತ್ತು ಕಲ್ಯಾಣದ ಕುರಿತು ಚರ್ಚೆ, ಸಮಸ್ಯೆ ಆಲಿಸಿ ಪರಿಹಾರ ಕಂಡುಕೊಳ್ಳಲು ನಡೆಸಲಾಗುವ ಮಕ್ಕಳ ಗ್ರಾಮಸಭೆಗೆ ಜಿಲ್ಲೆಯಲ್ಲಿ ಭಾರೀ ನಿರುತ್ಸಾಹ ವ್ಯಕ್ತವಾಗಿದೆ. ಪ್ರತಿ ಶಾಲೆಯಲ್ಲಿ ವರ್ಷಕ್ಕೆ ಎರಡರಿಂದ ಮೂರು ಬಾರಿ ಗ್ರಾಮ ಸಭೆ ನಡೆಸಬೇಕು. ಆದರೆ, ಈ ವರ್ಷ ಶೇ. 5ರಷ್ಟು ಮಾತ್ರ ಮಕ್ಕಳ ಗ್ರಾಮಸಭೆ ನಡೆಸಲಾಗಿದೆ. 267 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಭೆಗಳು ನಡೆಯದೆ ಇರುವುದು ಜಿಲ್ಲಾ ಪಂಚಾಯಿತಿ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ.

ಮಕ್ಕಳ ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ಮತ್ತು ರಕ್ಷಣೆಗೆ ಸಂಬಂಧಿಸಿ ಗ್ರಾಮಸಭೆ ಆಯೋಜಿಸಲಾಗುತ್ತದೆ. ಮಕ್ಕಳು ತಮ್ಮ ಶಾಲೆ, ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ ಸೇರಿ ಹಲವು ಸಮಸ್ಯೆಗಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಳ್ಳುತ್ತಾರೆ. ಶಾಲಾ ಪರಿಸರ, ಕೌಟುಂಬಿಕ, ಶೈಕ್ಷಣಿಕ ಹಾಗೂ ಬೌದ್ಧಿಕವಾಗಿ ಸುದೀರ್ಘ ಚರ್ಚೆ ನಡೆಸಬೇಕು. ಮಕ್ಕಳ ಹಕ್ಕುಗಳ ರಕ್ಷಣೆಗೆ ಕೈಗೊಂಡಿರುವ ಕ್ರಮಗಳು, ಬಾಲ ಕಾರ್ಮಿಕತೆ ನಿರ್ಮೂಲನೆ, ಶಾಲೆಯಿಂದ ಹೊರಗುಳಿದ



ಮಕ್ಕಳನ್ನು ಕರೆತರುವ ಪ್ರಕ್ರಿಯೆ, ಗ್ರಾಮದಲ್ಲಿ ಮಕ್ಕಳ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಯೋಜನೆಗಳ ಕುರಿತು ಚರ್ಚಿಸಬೇಕು. ಆದರೆ, ಹಾಸನದಲ್ಲಿ ಆ ನಿಟ್ಟಿನಲ್ಲಿ ನಿರೀಕ್ಷಿತ ಮಟ್ಟದಲ್ಲಿ ಕೆಲಸಗಳಾಗಿಲ್ಲ.

ಗ್ರಾಮ ಸಭೆಯನ್ನು ಯಶಸ್ವಿಯಾಗಿ ನಡೆಸಿದ ಜಿಲ್ಲೆಗಳಲ್ಲಿ ಚಿಕ್ಕಬಳ್ಳಾಪುರ ಶೇ. 98 ರಷ್ಟು ಸಾಧನೆಯೊಂದಿಗೆ ಮೊದಲ ಸ್ಥಾನದಲ್ಲಿದ್ದರೆ ಶೇ. 5ರ ಪ್ರಗತಿಯೊಂದಿಗೆ ಹಾಸನ 31ನೇ ಸ್ಥಾನ ಅಂದರೆ ಕೊನೆಯ ಸ್ಥಾನದಲ್ಲಿದೆ.

### ಪ್ರಚಾರಕ್ಕಷ್ಟೇ ಸೀಮಿತರಾದರು

ಜಿಲ್ಲಾ ಪಂಚಾಯಿತಿ ನೇತೃತ್ವದಲ್ಲಿ ನಡೆಯುವ ಈ ಮಹತ್ತರ ಕಾರ್ಯಕ್ರಮಕ್ಕೆ ಕ್ಷೇತ್ರ ಶಾಸಕರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಸದಸ್ಯರು, ಎಸ್‌ಡಿಎಂಸಿ ಪದಾಧಿಕಾರಿಗಳು, ಶಿಕ್ಷಕರು ಅಪೇಕ್ಷಿತರಿರುತ್ತಾರೆ. ಶಾಲಾ ಮುಖ್ಯ ಶಿಕ್ಷಕರಿಗೆ ಮೊದಲೇ ದಿನಾಂಕ ತಿಳಿಸಿ ಇಂತಹ ದಿನದಂದು ಮಕ್ಕಳ ಗ್ರಾಮ ಸಭೆ ನಡೆಸೋಣ ಎನ್ನುವುದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಜವಾಬ್ದಾರಿ. ಯೋಜನೆ ಆರಂಭದ ಕೆಲವು ದಿನ ಎಲ್ಲಾ ತಾಲ್ಲೂಕುಗಳಲ್ಲಿ ಕೆಲ ಶಾಲೆಗಳಿಗೆ ಭೇಟಿ ನೀಡಿ ಕಾರ್ಯಕ್ರಮ ಉದ್ಘಾಟಿಸಿದರು. ನಂತರದ ದಿನಗಳಲ್ಲಿ ಅದನ್ನು ಮುಂದುವರಿಸಬೇಕಿದ್ದ ಗ್ರಾಮ ಪಂಚಾಯಿತಿ ಅಧಿಕಾರಿ ಹಾಗೂ ಜನಪ್ರತಿನಿಧಿಗಳು ಸಂಪೂರ್ಣ ನಿರ್ಲಕ್ಷ್ಯ ವಹಿಸಿದ ಪರಿಣಾಮ ಪ್ರಗತಿಯಲ್ಲಿ ಜಿಲ್ಲೆ ಕೊನೆಯ ಸ್ಥಾನ ತಲುಪುವಂತಾಗಿದೆ. ಮೇಲ್ಮಟ್ಟದ ಅಧಿಕಾರಿಗಳು ಸಹ ಆ ಕುರಿತು ಚಿಂತನೆ ನಡೆಸದೇ ಇರುವುದು ದುರದೃಷ್ಟಕರ.

### ಶಿಕ್ಷಣ ಅನುದಾನವು ಮೊಟಕು

ಜಿಲ್ಲೆಯ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿವರ್ಷ ಶಾಲೆಗಾಗಿ ನೀಡಬೇಕಿರುವ ಶಿಕ್ಷಣ ಅನುದಾನ ನೀಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ವಾರ್ಷಿಕ 5 ಸಾವಿರ ರೂ.ಗಳನ್ನು ಪಂಚಾಯಿತಿ ನೀಡಬೇಕು. ಸರ್ಕಾರದಿಂದ ಈ ಯೋಜನೆಯಡಿ ಅನುದಾನ ಬರುತ್ತದೆಂಬ ಮಾಹಿತಿಯೂ ಕೆಲವು ಶಿಕ್ಷಕರಿಗೆ ಇಲ್ಲ. ಪಂಚಾಯಿತಿಯವರು ಮಾತ್ರ ಹಣ ನೀಡಿದ್ದೇವೆಂದು ಬಿಲ್ ಮಾಡುವುದು ಸಾಮಾನ್ಯವಾಗಿದೆ ಎಂದು ಹೆಸರು ಹೇಳಲಿಚ್ಛಿಸದ ಶಿಕ್ಷಕರೊಬ್ಬರು ಹೇಳಿದರು.

### ಶಾಲೆಗಳಲ್ಲಿ ಹೆಚ್ಚಲಿ ಅರಿವು ಕಾರ್ಯಕ್ರಮ

ಮಕ್ಕಳ ಗ್ರಾಮ ಸಭೆ ಎಂದರೆ ಕೇವಲ ಒಂದು ದಿನದ ಸಾಂಸ್ಕೃತಿಕ ಕಾರ್ಯಕ್ರಮವಲ್ಲ. ಸಂಪನ್ಮೂಲ ವ್ಯಕ್ತಿಗಳಿಂದ ಅರಿವು ಮೂಡಿಸುವ ಕೆಲಸವೂ ಆಗಬೇಕಿದೆ. ಪೋಕ್ಸೋ ಕಾಯ್ದೆ, ಬಾಲ ಕಾರ್ಮಿಕ ಪದ್ಧತಿ, ಶಾಲೆ ಬಿಟ್ಟ ಮಕ್ಕಳ ವಾಪಸ್ ಕರೆ ತರುವುದು ಸೇರಿದಂತೆ ಶೈಕ್ಷಣಿಕ ಪ್ರಗತಿ ದೃಷ್ಟಿಯಿಂದ ಹತ್ತು ಹಲವು ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಗಮನ ಹರಿಸಬೇಕಿದೆ.

# ಇತಿಹಾಸದಲ್ಲಿ ಈ ದಿನ

## ಡಿಸೆಂಬರ್-27

1936: ಇಂಗ್ಲಿಷ್ ರಾಜ ಎಡ್ವರ್ಡ್ ರಾಜಸಿಂಹಾಸನ ತ್ಯಜನೆ ಅಧಿಕೃತವಾಗಿ ಜಾರಿಯಾಯಿತು.

2007: ಪಾಕಿಸ್ತಾನದ ಮಾಜಿ ಪ್ರಧಾನಿ ಬೆನಜೀರ್ ಭುಟ್ಟೋ ರಾವಲ್ಪಿಂಡಿಯಲ್ಲಿ ನಡೆದ ಆತ್ಮಾಹುತಿ ದಾಳಿಯಲ್ಲಿ ಹತ್ಯೆ.

### ಜನನ

1571: ಜೋಹಾನ್ಸ್ ಕೆಪ್ಲರ್, ಜರ್ಮನ್ ಖಗೋಳ ವಿಜ್ಞಾನಿ, ಗ್ರಹಗಳ ಚಲನೆಯ ನಿಯಮಗಳ ಕಂಡುಹಿಡಿದವರು

1822: ಲೂಯಿ ಪಾಶ್ಚರ್, ಫ್ರೆಂಚ್ ವಿಜ್ಞಾನಿ, ಲಸಿಕೆಗಳು ಮತ್ತು ಪಾಸ್ಚರೈಜೇಶನ್ ವಿಧಾನಕ್ಕೆ ಪ್ರಸಿದ್ಧ

1939: ಲೀನಾ ಚಂದ್ರವರ್ಕರ್, ಭಾರತೀಯ ನಟಿ

### ಮರಣ

1904: ವಿಶ್ವನಾಥ್ ಕಾಶೀನಾಥ್ ರಾಜವಾಡೆ, ಭಾರತೀಯ ಇತಿಹಾಸಕಾರ ಹಾಗೂ ಸ್ವಾತಂತ್ರ್ಯ ಹೋರಾಟಗಾರ

# ಖುಷಿ ಮಂಕಾಗಿಸುವ 'ಖುಷಿ ಕೇಳುವ' ರೂಢಿ

- ಡಾ. ಪ್ರಿಯದರ್ಶಿನಿ ಶೆಟ್ಟರ್

ಯಾವುದೇ ಕಾರ್ಯಕ್ರಮ, ಸರಕಾರಿ ಕಚೇರಿಗಳಲ್ಲಿ ನಮ್ಮ ಕೆಲಸವಾದ ನಂತರ, ಸಭೆ ಸಮಾರಂಭಗಳು ಪೂರ್ಣಗೊಂಡ ಮೇಲೆ ಕೆಲವೊಮ್ಮೆ ಕೆಲಸದವರು ಖುಷಿ ಕೇಳುವುದನ್ನು ನೋಡಿರುತ್ತೇವೆ. ಅದರಲ್ಲೂ ಅಡುಗೆ ನೀಡುವವರು, ಪಾತ್ರೆ ತೊಳೆಯುವವರು, ಕಸ ಗುಡಿಸುವವರು ಕೇಳುವುದು ಸಾಮಾನ್ಯ. ಅವರು ಸರಿಯಾಗಿ ಕೆಲಸ ಮಾಡಿದಾಗ ನಮಗೆ ಇಷ್ಟವಾದರೆ ಸಂತೋಷದಿಂದ ಕೊಡುವುದೇನೋ ಸರಿ. ಆದರೆ ಯಾರಾದರೂ ಕೆಲಸದವರು ಅದನ್ನು ಡಿಮ್ಯಾಂಡ್ ಮಾಡಿ, ಏರು ಧ್ವನಿಯಲ್ಲಿ ಮಾತಾಡಿ, ಇಂತಿಷ್ಟು ಕೊಡಿ ಎಂದು ಕೇಳಿದರೆ ಆವಾಗ ಕಿರಿಕಿರಿ ಆಗೋದು ಸುಳ್ಳಲ್ಲ. ನನ್ನ ಅನುಭವಕ್ಕೆ ಬಂದ ಕೆಲವು ಸಂದರ್ಭಗಳನ್ನು ನೆನಪಿಸಿಕೊಂಡು ಬರೆದ ಲೇಖನವಿದು.



ಮುಕ್ತಾಯದ ಹಂತ ತಲುಪುವ ಸಂದರ್ಭದಲ್ಲಿ ಈ ತರ ಕೆಲಸ ಮಾಡುವವರು ಎದುರಿಗೆ ಬಂದು ಖುಷಿ ಕೊಡಿ ಅಂದಾಗ ಕೊಂಚ ಹಣವನ್ನು ಕೊಟ್ಟು ಕಳಿಸಬಹುದು. ಅವರದನ್ನು ಪಡೆದು ಸಂತೋಷದಿಂದ ಹೋದರೆ ಸರಿ. ಆದರೆ ಇತ್ತೀಚೆಗೆ ನಾನು ಗಮನಿಸಿದಂತೆ ಕೆಲವು ಕಚೇರಿಗಳಲ್ಲಿ ಕೆಳಗಿನ ಹಂತದ ನೌಕರರು, ಕೆಲಸದವರು, ಗೃಹ ಪ್ರವೇಶ, ಮದುವೆಯಂತಹ ಕಾರ್ಯಕ್ರಮಗಳಲ್ಲಿ ಬ್ಯಾಂಡ್ ಸೆಟ್‌ನವರು, ಅಡುಗೆ ಮಾಡುವವರು, ನೀಡುವವರು, ಕಸ ಗುಡಿಸುವವರು, ಪಾತ್ರೆ ತೊಳೆಯುವವರು, ನೆಲ ಒರೆಸುವವರು, ಕೆಲವೊಮ್ಮೆ ಪಾರ್ಕಿಂಗ್ ವ್ಯವಸ್ಥೆ ಮಾಡುವವರು ಹೀಗೆ ಮಾಡಿದ ಕೆಲಸಕ್ಕಾಗಿ ಹೆಚ್ಚು ಹಣ ನಿರೀಕ್ಷಿಸುವುದು ನಮ್ಮನ್ನು ಮುಜುಗರಕ್ಕೀಡು ಮಾಡುತ್ತದೆ. ಬೀಗರನ್ನು ಎದುರುಗೊಳ್ಳುವ ಸಮಯದಲ್ಲಿ ಬ್ಯಾಂಡ್ ಸೆಟ್‌ನವರು ಮದುವೆ ಹಾಲ್‌ನಲ್ಲಿ ಖುಷಿ ಕೇಳಿ, ಕೊಟ್ಟಷ್ಟು ಪಡೆದು ಹೋದರೆ ಸರಿ. ಇಲ್ಲದಿದ್ದರೆ ಯಾರು ಏನು ಅಂದುಕೊಂಡಾರು ಅಂತ ಇನ್ನೂ ಸ್ವಲ್ಪ ಹಣ ಕೊಟ್ಟರೂ, ಅವರು ನಾವು ಇಷ್ಟು ಜನ ಇದ್ದೇವೆ ಅಷ್ಟು ಜನ ಇದ್ದೇವೆ ಅಂದಾಗ, ನಾವು ಈಗ ಕೊಟ್ಟಿದ್ದನ್ನು ಎಲ್ಲರೂ ಖುಷಿಯಿಂದ ಹಂಚಿಕೊಳ್ಳಿ ಎಂದು ನಿರ್ದಾಕ್ಷಿಣ್ಯವಾಗಿ ಮುಖದ ಮೇಲೆ ಹೇಳಬೇಕಷ್ಟೆ. ನಮ್ಮ ಸಂಬಂಧಿಕರ ಮದುವೆಯ ದಿನ ಬೀಗರನ್ನು ಎದುರುಗೊಳ್ಳುವಾಗ ಬ್ಯಾಂಡ್ ಸೆಟ್‌ನವರು ಖುಷಿ ಕೇಳಿದರು. ಹೊಚ್ಚ ಹೊಸ ಬಟ್ಟೆಗಳಲ್ಲಿ ಮಿಂಚುತ್ತಿದ್ದ ವರನು ಕಿಸೆಗೆ ಕೈ ಹಾಕಿ ಹುಡುಕಿದರೆ ಅಲ್ಲೇನಿದೆ? ಖಾಲಿ ಕಿಸೆ! ತಕ್ಷಣ ವಧುವಿನ ಸಹೋದರ ಒಂದಿಷ್ಟು ಹಣವನ್ನು ಕಿಸೆಗೆ ತುರುಕಿದರು! ಆ ಹಣವು ನಮ್ಮ ಮುಜುಗರ ತಪ್ಪಿಸಿತ್ತು. ತಟ್ಟನೆ ಒಂದಿಷ್ಟು ಹಣ ಕೊಟ್ಟು ಅವರನ್ನು ಕಳಿಸಿದ್ದೆವು.

ಇತ್ತೀಚಿನ ದಿನಗಳಲ್ಲಿ ಎಲ್ಲವೂ ದುಬಾರಿಯಾದ ಹೊತ್ತಲ್ಲಿ, ಹೆಚ್ಚಾಗಿ ಖರ್ಚು ವೆಚ್ಚಗಳು ಆನ್‌ಲೈನ್ ನಲ್ಲಿಯೇ ಆಗುತ್ತಿರುವುದರಿಂದ ಪರ್ಸ್ ಹಾಗೂ ಕಿಸೆಯಲ್ಲಿ ನೋಟುಗಳು, ನಾಣ್ಯಗಳು ಅಪರೂಪ ಎಂಬಂತಾಗಿದೆ. ಇಂತಹ ಸಂದರ್ಭದಲ್ಲಿ ಮೊದಲೇ ಮಾತಾಡಿ ಹಣ ಕೊಟ್ಟರೂ ಮತ್ತೂ ಕೇಳಿದರೆ ಕಿರಿಕಿರಿಯಾಗೋದು ಸಾಮಾನ್ಯ. ಕೆಲವು ವರ್ಷಗಳ ಹಿಂದೆ ಆರ್.ಟಿ.ಓ. ಆಫೀಸಿಗೆ ನಾನು ಮತ್ತು ನನ್ನ ತಂಗಿ ಮೇಘ ಡ್ರೈವಿಂಗ್ ಲೈಸೆನ್ಸ್ ಪಡೆಯಲು ಹೋದಾಗ ನಮ್ಮ ಕೆಲಸಗಳೆಲ್ಲ ಮುಗಿದ ಮೇಲೆ ಮಹಿಳೆಯೊಬ್ಬಳು ಸಣ್ಣ ದನಿಯಲ್ಲಿ ಖುಷಿ ಕೇಳಿದಳು. ನಾನು ನನಗೇನೂ ಕೇಳಿಸಿಯೇ ಇಲ್ಲ ಎಂಬಂತೆ ಸುಮ್ಮನೆ ನಡೆದು ಬಂದೆ. ನನ್ನನ್ನು ಹಿಂಬಾಲಿಸಿ ಬಂದ ಮೇಘ ಅಅಅವರೇನೋ ಕೇಳಿದರುಟಟಟ ಅಂದಳು. ಆಕೆ ಏನು ಕೇಳಿದಳೆಂದು ನಾನು ಇವಳಿಗೆ ಹೇಳಿ, ಖುಷಿ ರೂಪದಲ್ಲಿ ಲಂಚ ಕೇಳಿದ್ದನ್ನು ಹೇಳಿದೆ ಮತ್ತು ನಾವೀಗಾಗಲೇ ಈ ಕೆಲಸಕ್ಕೆ ಶುಲ್ಕ ಪಾವತಿಸಿದ್ದಕ್ಕೆ ಈಗ ಅಲಕ್ಷ್ಯ ಮಾಡಿದ್ದಾಗಿ ಹೇಳಿದೆ.

ಮದುವೆ ರೆಜಿಸ್ಟರೇಶನ್ ಸಂದರ್ಭದಲ್ಲಿ ನನ್ನ ಪತಿ ಅವಿನಾಶ್ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದರು. ಅದು ಕೆಲವು ದಿನಗಳಲ್ಲಿ ಮುಗಿಯಬಹುದೆಂದು ಅಂದುಕೊಂಡಿದ್ದೆವು. ಆದರೆ ಒಂದು ತಿಂಗಳ ನಂತರ ವೆಬ್ ಸೈಟ್ ನಲ್ಲಿ ಆನ್ ಲೈನ್ ಅರ್ಜಿಗಳಿಗೆ ಸಂಬಂಧಿಸಿದಂತೆ ಏನೋ ಸಮಸ್ಯೆಯಾಗಿ ಆಫ್ ಲೈನ್ ಅರ್ಜಿಗಳನ್ನು ಭರ್ತಿ ಮಾಡಲು ಸೂಚನೆ ನೀಡಲಾಗಿತ್ತು. ನಾನು ಆಗ ಕಚೇರಿಗೆ ಹೋಗಿ ಫಾರ್ಮ್ ತುಂಬಿ, ಶುಲ್ಕ ಕಟ್ಟಿದ್ದೆ. ನಮಗೆ ಮ್ಯಾರೇಜ್ ರೆಜಿಸ್ಟರೇಶನ್ ಆಗುವುದು ಅರ್ಜೆಂಟ್ ಇದ್ದ ಕಾರಣ ನಾನು ಆಗಲೇ ಎರಡು ಮೂರು ಸಲ ಹೋಗಿ ಬಂದಿದ್ದೆ. ಅಂತೂ ಇಂತೂ ಒಂದು ದಿನ ನಿಗದಿಪಡಿಸಿ ಮಧ್ಯಾಹ್ನ ನಾವಿಬ್ಬರೂ, ಸಾಕ್ಷಿ ಎಂಬಂತೆ ಪಾಲಕರು, ನನ್ನ ತಂಗಿ ಎಲ್ಲರೂ ಹೋಗಿ ಸಹಿ ಹಾಕಿ ಕೆಲಸ ಮುಗಿಯಿತು ಅಂದುಕೊಂಡೆವು. ಆಗ ಅವರು ಸಂಜೆ ಐದೂವರೆ ನಂತರ ಬಂದು ಸರ್ಟಿಫಿಕೇಟ್ ಪಡೆಯಿರಿ ಅಂದರು. ನಾವಿಬ್ಬರೂ ಮತ್ತೆ ಸಂಜೆ ಹೋಗಿ ಅದನ್ನು ಪಡೆಯಲು ಕಾಯುತ್ತಿದ್ದೆವು. ಪ್ರಿಂಟ್ ಮಾಡಿ ಕೊಡುವಾತ ಎರಡು ಪ್ರತಿಗಳನ್ನು ಕೊಟ್ಟು ನಾಲ್ಕು ನೂರು ರೂಪಾಯಿ ಖುಷಿ ಕೇಳಿದ! ಅವಿನಾಶ್ ಅವರಿಗೆ ಅದು ನಾಲ್ಕು ರೂಪಾಯಿ ಅಂತ ಕೇಳಿಸಿತು. ಕೊಡಲು ಮುಂದಾದರು. ನಾನಾಗ ಆತ ಕೇಳಿದ್ದು ನಾಲ್ಕು ನೂರು ರೂಪಾಯಿಗಳು ಅಂದೆ. ಪ್ರಿಂಟ್ ಔಟ್ ಕೊಟ್ಟ. ನಾವದನ್ನು ಪಡೆದು ಇದಕ್ಕೆ ಈಗಾಗಲೇ ಹಣ ಪಾವತಿದ್ದನ್ನು ಹೇಳಿ, ಒಮ್ಮೆ ಆ ಸರ್ಟಿಫಿಕೇಟ್ ನೋಡಿದರೆ ಅಲ್ಲಿ ಯಾವುದೇ ಸಹಿ ಇರಲಿಲ್ಲ! ನಾನು ಗಲಿಬಿಲಿಗೊಂಡು ಅಅಅಹಣ ಕೊಟ್ಟರೆ ಮಾತ್ರ ಸಹಿ ಆಗಬಹುದೇನೋಟಟಟ ಅಂದೆ! ಇವರು ಮತ್ತೊಮ್ಮೆ ನೋಡಿ ಅಲ್ಲಿ ಡಿಜಿಟಲ್ ಸಹಿ ಇರುವುದರಿಂದ ಹಣ ಕೊಡುವುದು ಅವಶ್ಯವಿಲ್ಲ ಅಂದರು. ಮತ್ತೊಬ್ಬರನ್ನು ಕೇಳಿ ಖಾತ್ರಿ ಮಾಡಿಕೊಂಡು ಅಲ್ಲಿಂದ ಹೊರಟೆವು!

ಕೆಲ ದಿನಗಳ ಹಿಂದೆ ನನ್ನ ನಾದಿನಿಗೆ ಮಗುವಾದ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ನಾವಿದ್ದ ಕೊಠಡಿಗೆ ಬಂದ ಕೆಲಸದವಳೊಬ್ಬಳು ಅಅಅಣ್ಣ ಖುಷಿ ಕೊಡ್ರಿಟಟಟ ಅಂದಳು. ಬೆಳಿಗ್ಗೆ ಬೇಗ ಎದ್ದು ಪರ್ಸ್ ನಲ್ಲಿ ಎಷ್ಟು ಹಣ ಇದೆ ಎಂಬುದನ್ನೂ ನೋಡಿಕೊಳ್ಳದೇ ಆಸ್ಪತ್ರೆಗೆ ಓಡಿದ್ದ ನಾವು ಹಾಗೆ ಹೀಗೆ ಹುಡುಕಿ ಒಂದಿಷ್ಟು ಹಣ ಕೊಡಲು ಮುಂದಾದರೆ, ಆಕೆ ಅಅಅನಾವು ಎಂಟು ಮಂದಿ ಇದ್ದೇವೆಟಟಟ ಅಂದಳು. ನಾವು ಅವಳನ್ನು ಅದಷ್ಟು ಬೇಗ ಕಳಿಸಲು ಇನ್ನೂ ಸ್ವಲ್ಪ ಹಣ ನೀಡಲು ಹೋದರೆ, ಆಕೆ ಅಅಅಣ್ಣ ಗಂಡುಮಗು ಆಗಿದೆ, ಇನ್ನೂ ಸ್ವಲ್ಪ ಜಾಸ್ತಿ ಹಣ ಕೊಡಿಟಟಟ ಅಂದಳು! ಆಗ ಮಾತ್ರ ನಮ್ಮ ತಾಳ್ಮೆ ಕಳೆದು ಅಅಅಯಾವುದೇ ಮಗುವಾಗಿದ್ದರೂ ನಮಗೆ ಇಷ್ಟೇ ಸಂತೋಷವಾಗುತ್ತಿತ್ತುಟಟಟ ಅಂತ ಬೈದು ಆಕೆಗೆ ಹಣ ಕೊಡದೇ ಹೊರ ಕಳಿಸಿದಾಗ ನಮಗಾದ ಮುಜುಗರ ಅಷ್ಟಿಷ್ಟಲ್ಲ ಮರುದಿನ ಅರ್ಜೆಂಟ್ ಆಗಿ ನೆಲ ಒರೆಸಲು ಯಾರಾದರೂ ಬರಬೇಕಾದ ಸಮಯದಲ್ಲಿ ಆ ಮಹಿಳೆ ತಕ್ಷಣಕ್ಕೆ ಬರದೇ, ಬೇರೆಯವರನ್ನೂ ಕಳಿಸದೇ ಸತಾಯಿಸಿದಾಗ ನಿಜವಾಗಿಯೂ ಬೇಸರವಾಯಿತು. ಮಾಡುವ ಕೆಲಸಕ್ಕೆ ಸಂಬಳ ಪಡೆಯುವುದಿಲ್ಲವೇ ಇವರೆಲ್ಲ ಅನಿಸಿತು. ಮಾರನೇ ದಿನ ಮಗು ನೋಡಲು ಪರಿಚಯದವರೊಬ್ಬರು ಬಂದರು. ಸ್ವಲ್ಪ ಹೊತ್ತಿನ ನಂತರ ನೆಲ ಒರೆಸಲು ಬಂದಾಗ ಆಕೆಯನ್ನು ಗುರುತು ಹಿಡಿದು ಅಅಅಈಕೆ ನಾಲ್ಕೈದು ವರ್ಷಗಳ ಹಿಂದೆ ಬೇರೆ ಆಸ್ಪತ್ರೆಯಲ್ಲಿದ್ದಳು. ಚೆನ್ನಾಗಿ ಕೆಲಸ ಮಾಡುತ್ತಾಳೆಟಟಟ ಅಂತ ಹೊಗಳಿದಾಗಲೇ ಈ ಮಹಿಳೆ ಸಂತೋಷದಿಂದ ಕೆಲಸ ಮಾಡಿದ್ದು! ಇಂತವರ ಬಗ್ಗೆ ಅವರ ಮೇಲಿನವರಿಗೆ ಕಂಪ್ಲೆಂಟ್ ಕೊಡಲು ಹೆಚ್ಚು ವೇಳೆ ಬೇಕಾಗಿಲ್ಲ. ಆದರೆ ಅವರು ಹೆಚ್ಚು ಹಣದ ಆಮಿಷಕ್ಕೆ ಒಳಗಾಗಿ ಬರುವ ಸಂಬಳವನ್ನೂ ಕಳೆದುಕೊಳ್ಳುತ್ತಾರಲ್ಲ ಅಂದುಕೊಂಡು ಸುಮ್ಮನಾಗುತ್ತೇವೆ.

ಹೊಟೆಲ್‌ಗೆ ಹೋದಾಗ ಸರ್ವರ್ ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದರೆ ನಾವಾಗಿಯೇ ಚಿಲ್ಲರೆ ಇಟ್ಟು ಬರುತ್ತೇವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಈ ರೀತಿ ಹೆಚ್ಚು ಹಣ ಕೊಡಲು ಮುಂದಾದದ್ದೂ ಇದೆ. ಕಾರ್ಯಕ್ರಮಗಳು ಮುಗಿದು ಆಪ್ತೇಷ್ಟರನ್ನು ಬೀಳ್ಕೊಡುವ ಸಮಯದಲ್ಲಿ, ಅವರಿಗೆ ಕೊಟ್ಟು ಕಳಿಸಬೇಕಾದ ಅಡುಗೆ ಪದಾರ್ಥಗಳಿಗೆ ಡಬ್ಬಿ, ಚೀಲಕ್ಕಾಗಿ ತಡಕಾಡುವಾಗ, ಉಡುಗೊರೆ ನೀಡುವಾಗ, ಸಾಮಾನುಗಳನ್ನು ಜೋಡಿಸಿ ಪ್ಯಾಕ್ ಮಾಡುವ ಗಡಿಬಿಡಿಯಲ್ಲಿದ್ದಾಗ ಈ ತರ ಯಾರಾದರೂ ಹಣ ಕೇಳಿದರೆ, ಕೆಲಸದವರು ನಮ್ಮ ತಾಳ್ಮೆ ಪರೀಕ್ಷಿಸಿದರೆ ಸಿಟ್ಟು ಬಂದೇ ಬರುತ್ತದೆ. ಬಂದವರನ್ನು ಕಳಿಸಿ ಕೊಡುವ ಮೊದಲು ಇಂತವರನ್ನು ಸಾಗಹಾಕಬೇಕಾದ ಪ್ರಸಂಗಗಳು ನಡೆಯುತ್ತಲೇ ಇರುತ್ತವೆ. ಖುಷಿ ಕೊಟ್ಟರೆ ಮಾತ್ರ ಸರಿಯಾಗಿ ಕೆಲಸ ಮಾಡುತ್ತಾರೆ ಕೆಲವರು. ಇಂತಹ ಶ್ರಮದಾಯಕ ಕೆಲಸಗಳನ್ನು ನಿಭಾಯಿಸುವವರಿಗೆ ಹೆಚ್ಚುವರಿ ದುಡ್ಡು ನೀಡಿ ಉತ್ತೇಜನ ನೀಡುವುದೇನೋ ಸರಿ, ಆದರೆ ಅವರು ತಮಗೆ ಕೆಲಸ ಕೊಟ್ಟವರ ಆರ್ಥಿಕ ಪರಿಸ್ಥಿತಿಯನ್ನು, ಕಾರ್ಯಕ್ರಮದ ಸಂದರ್ಭವನ್ನು ತಲೆಯಲ್ಲಿಟ್ಟುಕೊಂಡು ಕೇಳಬೇಕೆನ್ನುವ ಪರಿಜ್ಞಾನ ಅವರಿಗೂ ಬೇಕು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248